# All India Radio: Bangalore
# National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**10.06.2025 / 7.35 am**

ಮುಖ್ಯಾಂಶಗಳು

೧. ಅತ್ಯಾಧುನಿಕ ತಂತ್ರಜ್ಞಾನದ ಸದುಪಯೋಗದೊಂದಿಗೆ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಲು ಯುವಕರಿಗೆ ಕರೆ ನೀಡಿದ ಲೋಕಸಭಾಧ್ಯಕ್ಷ ಓಂ ಬಿರ್ಲಾ

೨. ಪ್ರತಿಕೂಲ ಹವಾಮಾನದಿಂದಾಗಿ ಆಕ್ಸಿಯಮ್-೪ ಮಿಷನ್‌ನ ಉಡಾವಣೆ ನಾಳೆಗೆ ಮುಂದೂಡಿಕೆ

೩. ಕೇಂದ್ರ ಸರ್ಕಾರದಿಂದ ವಿಶೇಷ ಆರ್ಥಿಕ ವಲಯಗಳಿಗೆ ಸಂಬಂಧಿಸಿದ ಹಲವು ನೀತಿಗಳ ಸಡಿಲಿಕೆ

೪. ಕೃಷಿ ವಲಯದಲ್ಲಿ ಅಭಿವೃದ್ಧಿ ಇಲ್ಲದೇ ವಿಕಸಿತ ಭಾರತ ಸಾಧ್ಯವಿಲ್ಲ - ಸಚಿವ ಶಿವರಾಜ್ ಸಿಂಗ್ ಚೌಹಾಣ್ ಪ್ರತಿಪಾದನೆ

೫. ಎಎಫ್‌ಸಿ ಫುಟ್ಬಾಲ್ ಏಷ್ಯನ್ ಕಪ್ ಅರ್ಹತಾ ಸುತ್ತಿನ ಫೈನಲ್ - ಇಂದು ಭಾರತ - ಹಾಂಗ್‌ಕಾಂಗ್ ತಂಡಗಳು ಸೆಣಸು

*************************************

ಭಾರತ ತನ್ನ ಯುವಶಕ್ತಿ ಮತ್ತು ತಂತ್ರಜ್ಞಾನ ಕ್ಷೇತ್ರದ ನಾವಿನ್ಯತೆಯ ಮೂಲಕ ಸಮಕಾಲೀನ ಸವಾಲುಗಳನ್ನು ಎದುರಿಸುವಲ್ಲಿ ಜಾಗತಿಕ ನಾಯಕನಾಗಿ ಹೊರಹೊಮ್ಮುತ್ತಿದೆ ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ತಿಳಿಸಿದ್ದಾರೆ. ಐಐಟಿ ಜೋಧ್‌ಪುರದಲ್ಲಿ ಮಾತನಾಡಿದ ಅವರು, ಭಾರತದ ಯುವಜನರ ಸಹಕಾರದಿಂದ ಸಾಮಾಜಿಕ, ಆರ್ಥಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ದೇಶ ಮುನ್ನಡೆಯುತ್ತಿದೆ ಎಂದರು. ಇದೇ ವೇಳೆ ಸ್ಪೀಕರ್ ಓಂ ಬಿರ್ಲಾ ಅತ್ಯಾಧುನಿಕ ತಂತ್ರಜ್ಞಾನವನ್ನು ಸದುಪಯೋಗಪಡಿಸಿಕೊಂಡು ದೇಶದ ಅಭಿವೃದ್ಧಿಗೆ ಹೆಚ್ಚು ಕೊಡುಗೆ ನೀಡಬೇಕೆಂದು ಯುವಕರಿಗೆ ಕರೆ ನೀಡಿದರು.

*************************************

ಪ್ರತಿಕೂಲ ಹವಾಮಾನದಿಂದಾಗಿ ಭಾರತದ ಮೊದಲ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಸಾಗಿಸುವ ಆಕ್ಸಿಯಮ್ -೪ ಮಿಷನ್‌ನ ಉಡಾವಣೆಯನ್ನು ಇಂದಿನ ಬದಲು ನಾಳೆಗೆ ಮುಂದೂಡಲಾಗಿದೆ ಎಂದು ಇಸ್ರೋ ಅಧ್ಯಕ್ಷ ಡಾ.ವಿ.ನಾರಾಯಣನ್ ನಿನ್ನೆ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ನಾಳೆ ಸಂಜೆ ೫:೨೦ ಕ್ಕೆ ಉಡಾವಣೆಯನ್ನು ಗುರಿಯಾಗಿರಿಸಿಕೊಳ್ಳಲಾಗಿದೆ. ಆಕ್ಸಿಯಮ್ ಸ್ಪೇಸ್, ನಾಸಾ, ಸ್ಪೇಸ್‌ಎಕ್ಸ್ ಮತ್ತು ಇಸ್ರೋ ಜಂಟಿ ಪ್ರಯತ್ನವಾದ ಈ ಮಿಷನ್, ಸ್ಪೇಸ್‌ಎಕ್ಸ್ ಫಾಲ್ಕನ್ ೯ ರಾಕೆಟ್‌ನಲ್ಲಿ ನಾಲ್ಕು ಗಗನಯಾತ್ರಿಗಳನ್ನು ಐಖಖ ಗೆ ಕರೆದೊಯ್ಯಲಿದೆ. ಅವರಲ್ಲಿ ಭಾರತೀಯ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಸೇರಿದ್ದಾರೆ, ಅವರು ಬಾಹ್ಯಾಕಾಶ ನಿಲ್ದಾಣಕ್ಕೆ ಭೇಟಿ ನೀಡಿದ ಮೊದಲ ಭಾರತೀಯರಾಗಿದ್ದಾರೆ. ಭಾರತದ ಗಗನಯಾನ ಮಾನವ ಬಾಹ್ಯಾಕಾಶ ಹಾರಾಟ ಕಾರ್ಯಕ್ರಮದ ಭಾಗವಾಗಿ ಶುಭಾಂಶು ರಷ್ಯಾ ಮತ್ತು ಯುನೈಟೆಡ್ ಸ್ಟೇಟ್ಸ್‌ನಲ್ಲಿ ತರಬೇತಿ ಪಡೆದರು. ಅವರು ೧೪ ದಿನಗಳ ವಾಸ್ತವ್ಯದ ಸಮಯದಲ್ಲಿ ಜೀವಶಾಸ್ತ್ರ, ವಸ್ತು ವಿಜ್ಞಾನ ಮತ್ತು ಭಾರತೀಯ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಸೂಕ್ಷ್ಮ ಗುರುತ್ವಾಕರ್ಷಣೆಯ ಪ್ರಯೋಗಗಳನ್ನು ನಡೆಸಲಿದ್ದಾರೆ.

*************************************

ಅತ್ಯಾಧುನಿಕ ತಂತ್ರಜ್ಞಾನ ವಿಶೇಷವಾಗಿ ಸೆಮಿಕಂಡಕ್ಟರ್‌ಗಳು ಮತ್ತು ಎಲೆಕ್ಟ್ರಾನಿಕ್ ಘಟಕಗಳ ಉತ್ಪಾದನೆಯನ್ನು ಉತ್ತೇಜಿಸಲು ವಿಶೇಷ ಆರ್ಥಿಕ ವಲಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹಲವಾರು ನೀತಿ ಸಡಿಲಿಕೆಗಳನ್ನು ಘೋಷಿಸಿದೆ, ಈ ಬದಲಾವಣೆಗಳು ಭಾರತವನ್ನು ಜಾಗತಿಕ ಸೆಮಿಕಂಡಕ್ಟರ್

ಸರಪಳಿಯಲ್ಲಿ ಪ್ರಮುಖ ಸ್ಥಾನಕ್ಕೇರಿಸಲು, ಹೂಡಿಕೆ ಆಕರ್ಷಿಸಲು ಮತ್ತು ನಿಯಂತ್ರಣ ತಡೆಗಳನ್ನು ಕಡಿಮೆ ಮಾಡಲು ಯೋಜಿಸಲ್ಪಟ್ಟಿವೆ. ೨೦೦೬ರ ವಿಶೇಷ ಆರ್ಥಿಕ ವಲಯಗಳ ನಿಯಮಾವಳಿಯ ನಿಯಮ ೫ ಅನ್ನು ಪರಿಷ್ಕರಿಸಿ, ಸೆಮಿಕಂಡ್‌ಕ್ಟರ್ ಅಥವಾ ಎಲೆಕ್ಟ್ರಾನಿಕ್ ಘಟಕಗಳ ಉತ್ಪಾದನೆಗೆ ಮೀಸಲಾದ ಆರ್ಥಿಕ ವಲಯಗಳಿಗೆ ಅಗತ್ಯವಿರುವ ಕನಿಷ್ಠ ೫೦ ಹೆಕ್ಟೇರ್ ಭೂಮಿಯ ಅಗತ್ಯವನ್ನು ಕೇವಲ ೧೦ ಹೆಕ್ಟೇರಿಗೆ ಇಳಿಸಲಾಗಿದೆ. ನಿಯಮ ೭ ರಲ್ಲೂ ಬದಲಾವಣೆಗಳನ್ನು ಮಾಡಲಾಗಿದ್ದು, ಭೂಮಿಯನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಅಥವಾ ಅಧಿಕೃತ ಸಂಸ್ಥೆಗಳಿಗೆ ಬಾಡಿಗೆಗೆ ನೀಡಿದಾಗ ಅಥವಾ ಹೂಡಿಕೆಯಾದಾಗ, ನಿರ್ಬಂಧರಹಿತ ಭೂಮಿಯ ನಿಯಮಗಳನ್ನು ಶಿಫಾರಸ್ಸು ಮಂಡಳಿ ಸಡಿಲಿಸಬಹುದು. ನಿಯಮ ೫೩ ರ ಪರಿಷ್ಕರಣೆ ಮೂಲಕ ಉಚಿತವಾಗಿ ಸ್ವೀಕರಿಸುವ ಅಥವಾ ಪೂರೈಸುವ ಸರಕುಗಳ ಮೌಲ್ಯವನ್ನೂ ವಿದೇಶೀ ವಿನಿಮಯ ಆದಾಯ ಲೆಕ್ಕಾಚಾರದಲ್ಲಿ ಸೇರಿಸಲು ಅನುಮತಿಸಲಾಗಿದೆ. ನಿಯಮ ೧೮ ರಡಿ  ಆರ್ಥಿಕ ವಲಯಗಳಿಗೆ ದೇಶೀಯ ತೆರಿಗೆ ಪ್ರದೇಶದಲ್ಲಿ ಸರಕುಗಳನ್ನು ಮಾರಾಟ ಮಾಡಲು, ಸಂಬಂಧಿತ ತೆರಿಗೆಗಳನ್ನು ಪಾವತಿಸಿದ ನಂತರ ಅವಕಾಶ ನೀಡಲಾಗಿದೆ.

***************************************

ಕಳೆದ ಒಂದು ದಶಕದಲ್ಲಿ ಭಾರತ, ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದ ತತ್ವದಡಿ ಮುನ್ನಡೆಯುತ್ತಿದೆ.  ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ.  ಈ ಮಾಲಿಕೆಯಲ್ಲಿ ಇಂದು, 'ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿ' ಕುರಿತ ವರದಿ ಇಲ್ಲಿದೆ.

ಗಂಗೆಯ ಪುನರುಜ್ಜೀವನಕ್ಕಾಗಿ ರೂಪಿಸಲಾಗಿರುವ ನಮಾಮಿ ಗಂಗೆ ಯೋಜನೆ ಜಗತ್ತಿನ ಅತಿದೊಡ್ಡ ನದಿ ಪುನರುಜ್ಜೀವನ ಯೋಜನೆಯಾಗಿದೆ, ಈ ಯೋಜನೆಯಿಂದ ಗಂಗಾ ನದಿ ನೀರಿನ ಗುಣಮಟ್ಟ ಸುಧಾರಿಸಿದ್ದು, ಜೀವವೈವಿಧ್ಯತೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಇದರ ಜೊತೆಗೆ ಪರಿಸರ ಸಂರಕ್ಷಣೆಗೆ ಪೂರಕ ವಾಗಿರುವ ಸ್ವಚ್ಛ ಭಾರತ ಮಿಷನ್ ಮತ್ತು ಗೋಬರ್‌ಧನ್ ಯೋಜನೆ ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆ ಮತ್ತು ಕಸದ ನಿರ್ವಹಣೆಗೆ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿವೆ. "ತಾಯಿಯ ಹೆಸರಿನಲ್ಲಿ ಒಂದು ಗಿಡ" ಅಭಿಯಾನದಡಿ ದೇಶಾದ್ಯಂತ ಈವರೆಗೆ ಸುಮಾರು ೧೪೨ ಕೋಟಿ ಗಿಡಗಳನ್ನು ನೆಡಲಾಗಿದ್ದು, ಇಂಗಾಲದ ಅತಿಹೊರಸೂಸುವಿಕೆಯನ್ನು ಹತೋಟಿಯಲ್ಲಿಡಲು ಸಹಕಾರಿಯಾಗಿದೆ. ಭಾರತ ಪ್ರಾಜೆಕ್ಟ್ ಚೀತಾ, ಪ್ರಾಜೆಕ್ಟ್ ಸಿಂಹ, ಮತ್ತು ಪ್ರಾಜೆಕ್ಟ್ ಟೈಗರ್ ಪ್ರಯತ್ನಗಳ ಮೂಲಕ ವನ್ಯಜೀವಿ ಸಂರಕ್ಷಣೆಯಲ್ಲೂ ಯಶಸ್ಸು ಸಾಧಿಸಿದ್ದು, ಪ್ರಸ್ತುತ ದೇಶದಲ್ಲಿ ೩ ಸಾವಿರದ ೬೮೨ ಹುಲಿಗಳಿವೆ, ಇದು ಪ್ರಪಂಚದ ಹುಲಿಗಳ ಸಂಖ್ಯೆಯ ಶೇಕಡ ೭೫ ರಷ್ಟಿದೆ. ಭಾರತ ಏಷ್ಯಾದಲ್ಲೇ ಅತಿಹೆಚ್ಚು ಸಂಖ್ಯೆಯ ಅಂದರೆ, ೯೧ ರಾಂಸರ್ ಸೈಟ್‌ಗಳನ್ನು ಹೊಂದಿದೆ. ಇದು ದೇಶದ ಜೌಗು ಪ್ರದೇಶಗಳನ್ನು ಸಂಕ್ಷಿಸುವ ಸರ್ಕಾರದ ಬದ್ಧತೆಯ ಪ್ರತೀಕವಾಗಿದೆ. ಇದರ ಜೊತೆಗೆ ಭಾರತದ ೧೩ ಕಡಲತೀರಗಳು ಬ್ಲೂ ಫ್ಲ್ಯಾಗ್ ಪ್ರಮಾಣಪತ್ರ ಪಡೆದಿವೆ. ಇನ್ನು ಹವಾಮಾನ ಸದೃಢತೆಗೆ ಪೂರಕವಾಗಿ, ಅಮೃತ ಧರೋಹರ್ ಮತ್ತು ಮಿಶ್ಟಿ ಯೋಜನೆಗಳು,  ಜೌಗು ಪ್ರದೇಶಗಳು ಮತ್ತು ಮ್ಯಾಂಗ್ರೋವ್ ಅರಣ್ಯ ಪ್ರದೇಶದ ಸಂರಕ್ಷಣೆಗೆ ಸಹಕರಿಸಿದೆ ಭಾರತದ ಹಸಿರು ಪರಿವರ್ತನೆ ಕೇವಲ ಒಂದು ನೀತಿಯಲ್ಲ ಬದಲಿಗೆ ಒಂದು ಜನಾಂದೋಲನ, ಒಂದು ಜವಾಬ್ದಾರಿ ಹಾಗೂ ಭವಿಷ್ಯ ಪೀಳಿಗೆಗಳಿಗೆ ನೀಡಿದ ಭರವಸೆಯಾಗಿದೆ.

***************************************

ಕೃಷಿ ಕ್ಷೇತ್ರದಲ್ಲಿ ಪ್ರಗತಿ ಇಲ್ಲದೆ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಸಾಧ್ಯವಿಲ್ಲ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯಲ್ಲಿ ನಡೆದ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಕಾರ್ಯಕ್ರಮದಲ್ಲಿ ರೈತರೊಂದಿಗೆ ಮಾತನಾಡಿದ ಅವರು, ಆಹಾರ ಭದ್ರತೆ ಸಾಧಿಸುವುದು, ರೈತರ ಆದಾಯ ಹೆಚ್ಚಿಸುವುದು ಮತ್ತು ಭವಿಷ್ಯದ ಪೀಳಿಗೆಗಾಗಿ ಮಣ್ಣನ್ನು ರಕ್ಷಿಸುವ ಅಗತ್ಯತೆಯನ್ನು ಅವರು ಒತ್ತಿ ಹೇಳಿದರು.

***************************************

ಡಿಜಿಟಲ್ ಇಂಡಿಯಾ ಭಾಷಿಣಿ ವಿಭಾಗ ಮತ್ತು ರೈಲ್ವೆ ಮಾಹಿತಿ ವ್ಯವಸ್ಥೆಗಳ ಕೇಂದ್ರ - ಸಿಆರ್‌ಐಎಸ್ ಸಾರ್ವಜನಿಕರಿಗೆ ನೇರ ಸಂಪರ್ಕ ಹೊಂದಿರುವ ಪ್ರಮುಖ ರೈಲ್ವೆ ತಾಣಗಳಲ್ಲಿ ಬಹುಭಾಷಾ ಕೃತಕ ಬುದ್ಧಿಮತ್ತೆ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ಹಾಗೂ ಜಾರಿಗೆ ತರುವ ಉದ್ದೇಶದ ತಿಳಿವಳಿಕಾ ಒಪ್ಪಂದಕ್ಕೆ ಸಹಿ ಹಾಕಿವೆ. ಈ ಒಪ್ಪಂದಕ್ಕೆ ಭಾಷಿಣಿಯ ಕಾರ್ಯನಿರ್ವಾಹಕ ಅಧಿಕಾರಿ ಅಮಿತಾಭ್ ನಾಗ್ ಮತ್ತು ಸಿಆರ್‌ಐಎಸ್ ನ ವ್ಯವಸ್ಥಾಪಕ ನಿರ್ದೇಶಕ ಜಿ.ವಿ.ಎಲ್. ಸತ್ಯಕುಮಾರ್ ಸಹಿ ಹಾಕಿದರು. ಈ ತಂತ್ರಜ್ಞಾನ ಸಹಭಾಗಿತ್ವದಿಂದ, ಭಾಷಿಣಿಯ ಸ್ಪೀಚ್ ರಿಕಗ್ನಿಷನ್, ವಿಷಯ ಅನುವಾದ, ಟೆಕ್ಸ್ಟ್ ಟು ಸ್ಪೀಚ್, ಹಾಗೂ ಓಪ್ಟಿಕಲ್ ಕ್ಯಾರೆಕ್ಟರ್ ರಿಕಗ್ನಿಷನ್ ಸಾಮರ್ಥ್ಯಗಳನ್ನು ಸಿಆರ್‌ಐಎಸ್ ನ ನ್ಯಾಷನಲ್ ಟ್ರೈನ್ ಎನ್‌ಕ್ವೈರಿ ಸಿಸ್ಟಮ್ ಮತ್ತು ರೇಲ್‌ಮದದ್ ಸೇರಿದಂತೆ ವಿವಿಧ ವ್ಯವಸ್ಥೆಗಳಲ್ಲಿ ಅಳವಡಿಸಲಾಗುವುದು. ಇದರ ಫಲವಾಗಿ, ೨೨ ಭಾರತೀಯ ಭಾಷೆಗಳಲ್ಲಿ ರೈಲ್ವೆ ಸೇವೆಗಳನ್ನು ನಾಗರಿಕರು ಬಳಸಿಕೊಳ್ಳಲು ಸಾಧ್ಯವಾಗಲಿದೆ.

****************************************

ಮುಂಬೈನಲ್ಲಿರುವ ಸ್ಥಳೀಯ ಎಸಿ ಅಲ್ಲದ ರೈಲುಗಳಲ್ಲಿ ಸ್ವಯಂಚಾಲಿತ ಬಾಗಿಲು ಮುಚ್ಚುವ ಸಮಸ್ಯೆಗೆ ಪ್ರಾಯೋಗಿಕ ಪರಿಹಾರವನ್ನು ಕಂಡುಕೊಳ್ಳಲು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ನಿನ್ನೆ ಇಂಟೆಗ್ರೇಟೆಡ್ ಕೋಚ್ ಫ್ಯಾಕ್ಟರಿ ತಂಡದೊಂದಿಗೆ ವಿವರವಾದ ಸಭೆ ನಡೆಸಿದರು. ಮುಂಬೈನಲ್ಲಿ ಸ್ಥಳೀಯ ರೈಲಿನ ಫುಟ್‌ಬೋರ್ಡ್‌ನಲ್ಲಿ ಪ್ರಯಾಣಿಸುವಾಗ ನಾಲ್ಕು ಪ್ರಯಾಣಿಕರು ಪ್ರಾಣ ಕಳೆದುಕೊಂಡ ಘಟನೆಯ ಹಿನ್ನೆಲೆಯಲ್ಲಿ ಈ ಸಭೆ ನಡೆಯಿತು. ವಿವರವಾದ ಚರ್ಚೆಗಳ ನಂತರ, ಬೋಗಿಗಳಲ್ಲಿ ಸೂಕ್ತವಾದ ವ್ಯವಸ್ಥೆಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಎಸಿ ಅಲ್ಲದ ರೈಲುಗಳನ್ನು ವಿನ್ಯಾಸಗೊಳಿಸಿ ತಯಾರಿಸಲಾಗುವುದು ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

****************************************

'ಆಪರೇಷನ್ ಸಿಂಧೂರ್'ನ ನಂತರ ಜಮ್ಮು ಮತ್ತು ಕಾಶ್ಮೀರದ ಗಡಿಭಾಗಗಳಲ್ಲಿ ಪಾಕಿಸ್ತಾನದ ಶೆಲ್ ದಾಳಿಯಿಂದ ಹಾನಿಯಾದ ಮನೆಗಳಿಗೆ ಹೆಚ್ಚುವರಿ ಪರಿಹಾರವಾಗಿ ಸರ್ಕಾರ ೨೫ ಕೋಟಿ ರೂಪಾಯಿ ನೆರವನ್ನು ಒದಗಿಸಲು ತೀರ್ಮಾನಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಪರಿಹಾರವನ್ನು ಘೋಷಿಸಿದ್ದರು. ಈ ಯೋಜನೆಯಡಿ ೨ ಸಾವಿರದ ೬೦ ಮನೆಗಳಿಗೆ ಆರ್ಥಿಕ ನೆರವು ನೀಡಲಾಗುವುದು.

****************************************

ಹಾಂಕಾಂಗ್‌ನ ಕೈ ತಕ್ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ೨೦೨೭ ರ ಎಎಫ್‌ಸಿ ಫುಟ್ಬಾಲ್ ಏಷ್ಯನ್ ಕಪ್ ಅರ್ಹತಾ ಸುತ್ತಿನ ಫೈನಲ್ ಪಂದ್ಯದಲ್ಲಿ, ಭಾರತದ ಹಿರಿಯ ಪುರುಷರ ತಂಡವು ಹಾಂಕಾಂಗ್ ವಿರುದ್ಧ ಸೆಣಸಲಿದೆ. ಈ ಪಂದ್ಯ ಭಾರತೀಯ ಕಾಲಮಾನ ಸಂಜೆ ೦೫:೩೦ ಕ್ಕೆ ಆರಂಭವಾಗಲಿದೆ. ನಾಲ್ಕು ತಂಡಗಳ ಗುಂಪಿನಲ್ಲಿ ಈ ಎರಡೂ ತಂಡಗಳು ಅಗ್ರ ಎರಡು ಸ್ಥಾನಗಳಲ್ಲಿವೆ. ಅರ್ಹತಾ ಸುತ್ತಿನಲ್ಲಿ ಪಾಟ್ ೧ ರಲ್ಲಿ ಭಾರತ, ಸ್ಥಾನ ಪಡೆದಿದೆ.

****************************************